## ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 30 ಡಿಟಿಬಿ 2019

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು.ದಿನಾಂಕ:04-06-2019

## ಸುತ್ತೋಲೆ

ವಿಷಯ:- ತೃತೀಯ ಲಿಂಗಿಗಳ (Transgenders) ಶಾಲಾ ದಾಖಲಾತಿಗಳಲ್ಲಿ/ ಎಸ್.ಎಸ್.ಎಲ್.ಸಿ./ಪಿ.ಯು.ಸಿ. ಪ್ರಮಾಣ ಪತ್ರಗಳಲ್ಲಿ ಹೆಸರು ಹಾಗೂ ಲಿಂಗ ತಿದ್ದುಪಡಿ ಮಾಡುವ ಕುರಿತು ಸೂಚನೆಗಳು.

ಉಲ್ಲೇಖ:- 1) ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 100 ಡಿಟಿಬಿ 2014, ದಿನಾಂಕ:26-10-2015.

2) ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರು ಇಲ್ಲಿ ದಾಖಲಾದ ರಿಟ್ ಪಿಟಿಷನ್ ಸಂಖ್ಯೆ:12113/2019ರ ತೀರ್ಪು ದಿನಾಂಕ:26-03-2019

ವಿದ್ಯಾರ್ಥಿಗಳ ಶಾಲಾ ದಾಖಲಾತಿಗಳಲ್ಲಿ ವಿದ್ಯಾರ್ಥಿಯ ಹೆಸರು, ಪೋಷಕರ ಹೆಸರು, ಜಾತಿ, ಜನ್ಮ ದಿನಾಂಕ ಇತ್ಯಾದಿ ತಿದ್ದುಪಡಿ ಮಾಡುವ ಬಗ್ಗೆ ಉಲ್ಲೇಖ(1)ರ ಸುತ್ತೋಲೆಯಲ್ಲಿ ನಿರ್ದೇಶನ ನೀಡಲಾಗಿರುತ್ತದೆ.

ಉಲ್ಲೇಖ(2)ರ ತೀರ್ಪಿನಲ್ಲಿ ಅರ್ಜಿದಾರರಾದ ಜೀವಿತ ಎಂ, ಇವರು ತನ್ನ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಅಂಕಪಟ್ಟಿಗಳಲ್ಲಿ ತನ್ನ ಹೆಸರು ಜೀವ ಎಂ. ಎಂದು ಮತ್ತು ಲಿಂಗವನ್ನು ಪುರುಷ ಎಂದು ತಿದ್ದುಪಡಿಗೊಳಿಸುವಂತೆ ಪ್ರತಿವಾದಿಗಳಾದ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಹಾಗೂ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ಇವರುಗಳು ಯಾವುದೇ ಕ್ರಮವನ್ನು ಕೈಗೊಳ್ಳದಿರುವ ಕುರಿತು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದ ಸಂಬಂಧ ಘನ ಉಚ್ಚ ನ್ಯಾಯಾಲಯವು ಅರ್ಜಿದಾರರು ದಾವೆಯೊಂದಿಗೆ ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸಿ ತೃತೀಯ ಲಿಂಗಿಗಳ ಸಂಬಂಧ ಎಸ್.ಎಸ್.ಎಲ್.ಸಿ./ಪಿ.ಯು.ಸಿ. ಪ್ರಮಾಣ ಪತ್ರಗಳಲ್ಲಿ ಹೆಸರು ಮತ್ತು ಲಿಂಗ ತಿದ್ದುಪಡಿಗೊಳಿಸುವ ಬಗ್ಗೆ ಯಾವುದೇ ಸೂಕ್ತ ಮಾರ್ಗಸೂಚಿ ಅಥವಾ ಸುತ್ತೋಲೆಗಳು ಇಲ್ಲದೇ ಇರುವುದನ್ನು ಗಮನಿಸಿ ಅರ್ಜಿದಾರರ ಕೋರಿಕೆಯಂತೆ ಅವರ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಪ್ರಮಾಣ ಪತ್ರಗಳಲ್ಲಿ ಅವರ ಹೆಸರು ಮತ್ತು ಲಿಂಗ ತಿದ್ದುಪಡಿಗೊಳಿಸುವ ಬಗ್ಗೆ ಎರಡು ತಿಂಗಳೊಳಗಾಗಿ ನಿರ್ಧಾರ ತೆಗೆದುಕೊಂಡು ಅಗತ್ಯ ಕ್ರಮವಹಿಸುವಂತೆ ಸೂಚನೆ ನೀಡಿರುತ್ತದೆ.

ಮುಂದುವರೆದು, ತೃತೀಯ ಲಿಂಗಿಗಳ (Transgenders) ಶಾಲಾ ದಾಖಲಾತಿಗಳಲ್ಲಿ/ ಎಸ್.ಎಸ್.ಎಲ್.ಸಿ./ಪಿ.ಯು.ಸಿ. ಪ್ರಮಾಣ ಪತ್ರಗಳಲ್ಲಿ ಹೆಸರು ಹಾಗೂ ಲಿಂಗ ತಿದ್ದುಪಡಿ ಮಾಡುವ ಕುರಿತು ಸೂಕ್ತ ಸುತ್ತೋಲೆ/ಮಾರ್ಗಸೂಚಿಯನ್ನು ರಚಿಸುವಂತೆ ಶಿಕ್ಷಣ ಇಲಾಖೆಗೆ ತಿಳಿಸಿದೆ. ತೀರ್ಪಿನ ಉದ್ಧೃತ ಭಾಗ ಈ ಕೆಳಕಂಡಂತಿದೆ:--

Scanned with CamScanner

The Hon'ble Apex Court in the case of National Legal Services Authority vs. Union of India and others reported in (2014) 5 SCC 438 has observed thus:-

> " 135.1. Hijras, eunuchs, apart from binary genders, be treated as "third gender", for the purpose of safeguarding their rights under part III of our Consstitution and the laws made by Parliament and the State Legislature.
>
> 135.2. Transgender persons' right to decide their self-identified gender is also upheld and the Centre and State Governments are directed to grant legal recognition of their gender identity such as male, female or as third gender.
>
> 135.3. We direct the Centre and the State Governments to take steps to treat them as Socially and Educationally Backward Classes of citizens and extend all kinds of reservation in cases of admission in educational institutions and for public appointments."

In the light of the judgment of the Hon'ble Apex Court as aforesaid, it is mandatory for the State of Karnataka represented by the Principal Secretary of Educational Department to issue circular instructions to the authorities/institutions concerned to act in consonance with the directions issued by the Hon'ble Apex Court . **The Principal Secretary, Education Department, State of Karnataka** shall consider the same and take necessary action to implement the directions of the Hon'ble Apex Court in an expedite manner without driving the Transgenders to Courts in as much as change of their name and gender is concerned.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದನ್ವಯ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಲಿಂಗವನ್ನು ಸ್ವಯಂ ಗುರ್ತಿಸಿಕೊಳ್ಳುವುದು ಅವನ ಹಕ್ಕಾಗಿರುತ್ತದೆ ಹಾಗೂ ಸಂವಿಧಾನದ ವಿಧಿ 19(1)(ಎ) ಪ್ರಕಾರ ಪ್ರತಿಯೊಬ್ಬ ವ್ಯಕ್ತಿಯ ಖಾಸಗಿತನವನ್ನು ಗೌರವಿಸುವುದು. ಸ್ವ-ಗುರ್ತಿಸಿಕೊಳ್ಳುವಿಕೆ ಮತ್ತು ವೈಯಕ್ತಿಕ ಸಮಗ್ರತೆಯನ್ನು ಕಾಪಾಡಿಕೊಳ್ಳುವುದು ಅವನ ಮೂಲಭೂತ ಹಕ್ಕಾಗಿರುತ್ತದೆ. ಇವುಗಳನ್ನು ರಕ್ಷಿಸುವುದು ಪ್ರತಿಯೊಂದು ರಾಷ್ಟ್ರದ ಕರ್ತವ್ಯವಾಗಿರುತ್ತದೆ. ಆದ್ದರಿಂದ ಲಿಂಗ ಬದಲಾವಣೆಯಾದ ವ್ಯಕ್ತಿಗಳು(ತೃತೀಯ ಲಿಂಗಿಗಳು) ತಮ್ಮ ಲಿಂಗವನ್ನು ಸ್ವಯಂ ಗುರ್ತಿಸಿಕೊಂಡು ದಾಖಲೆಗಳಲ್ಲಿ ನಮೂದಿಸಿಕೊಳ್ಳುವ ಹಕ್ಕನ್ನು ಹೊಂದಿರುತ್ತಾರೆ.

ಆದ್ದರಿಂದ ತೃತೀಯ ಲಿಂಗಿಗಳ ಪ್ರಕರಣದಲ್ಲಿ (Transgenders) ವಿದ್ಯಾರ್ಥಿಗಳ ಶಾಲಾ ದಾಖಲೆಗಳಲ್ಲಿ ಅಥವಾ ಎಸ್.ಎಸ್.ಎಲ್.ಸಿ. ಪ್ರಮಾಣ ಪತ್ರ ಅಥವಾ ಪಿ.ಯು.ಸಿ. ಪ್ರಮಾಣ ಪತ್ರದಲ್ಲಿ ಅವರುಗಳ ಹೆಸರು ಹಾಗೂ ಲಿಂಗ ತಿದ್ದುಪಡಿ ಕೋರಿ ಸೂಕ್ತ ದಾಖಲೆಗಳೊಂದಿಗೆ ಮನವಿ ಸಲ್ಲಿಸಿದಲ್ಲಿ ಸಂಬಂಧಪಟ್ಟ ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು, ಅಥವಾ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರುಗಳು ಸಿವಿಲ್ ನ್ಯಾಯಾಲಯಗಳಿಂದ

Scanned with CamScanner

ಅಥವಾ ಇತರೇ ನ್ಯಾಯಾಲಯಗಳಿಂದ ಡಿಕ್ರಿ ಆದೇಶವನ್ನು ಪಡೆದು ಸಲ್ಲಿಸುವಂತೆ ಆಕ್ಷೇಪಿಸಿ ಮನವಿಯನ್ನು ತಿರಸ್ಕರಿಸದೇ ಅವರು ಸಲ್ಲಿಸಿರುವ ವೈದ್ಯಕೀಯ ದಾಖಲೆಗಳ ಆಧಾರದ ಮೇಲೆ ಅವರ ಶಾಲಾ ದಾಖಲಾತಿಗಳು ಹಾಗೂ ಎಸ್.ಎಸ್.ಎಲ್.ಸಿ./ಪಿ.ಯು.ಸಿ. ಪ್ರಮಾಣ ಪತ್ರಗಳಲ್ಲಿ ಹೆಸರು ಮತ್ತು ಲಿಂಗ ತಿದ್ದುಪಡಿಗಳನ್ನು ಮಾಡಲು ಅಗತ್ಯ ಕ್ರಮವಹಿಸುವಂತೆ ಈ ಮೂಲಕ ಸೂಚಿಸಿದೆ.

(ಟಿ.ಡಿ. ನಾಗೇಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ(ಆಡಳಿತ).

ಇವರಿಗೆ,

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ/ಧಾರವಾಡ,
3. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ 18ನೇ ಕ್ರಾಸ್, ಬೆಂಗಳೂರು.
4. ನಿರ್ದೇಶಕರು/ ಕಾರ್ಯದರ್ಶಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ. ಬೆಂಗಳೂರು.
5. ಕಾರ್ಯದರ್ಶಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಹಾಗೂ ಪದನಿಮಿತ್ತ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು/ ಮೈಸೂರು/ ಬೆಳಗಾವಿ/ ಕಲಬುರಗಿ
6. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ } ಆಯುಕ್ತರು. ಸಾ.ಶಿ.ಇಲಾಖೆ
7. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ } ಬೆಂಗಳೂರು ಇವರ ಮುಖಾಂತರ
8. ಮಾಹಿತಿ ಕೇಂದ್ರ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರತಿ ಮಾಹಿತಿಗಾಗಿ:-

1) ಶ್ರೀಮತಿ ಪ್ರಮೋದಿನಿ ಕಿಶನ್, ಹೆಚ್ಚುವರಿ ಸರ್ಕಾರಿ ವಕೀಲರು, ಅಡ್ವೋಕೇಟ್ ಜನರಲ್‌ರವರ ಕಛೇರಿ, ಉಚ್ಚ ನ್ಯಾಯಾಲಯದ ಕಟ್ಟಡ, ಬೆಂಗಳೂರು-560 001.
2) ಶ್ರೀ ಜೀವ ಎಂ. S/o ಶ್ರೀ ಮುರುಗೇಶನ್ ಆರ್. ನಂ.1510, 1ನೇ ಮಹಡಿ, 7ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಹಂಪಿನಗರ, ಬೆಂಗಳೂರು 560 014.

Scanned with CamScanner